‘ಹಾಗೆ ಮಾಡಿದರೆ ನನ್ನನ್ನು ಲೋಕ ಕತ್ತೆಯೆಂದು ಬೈದೀತು’ ಎಂದು ಒಲ್ಲೆಂದನಂತೆ; ಒಂದು ಕತ್ತೆ ತನ್ನಷ್ಟಕ್ಕೆ ತಾನೇ ಹಾಡಿಕೊಳ್ಳುವುದನ್ನು ಆಲಿಸಿದ ಒಂಟೆ, ‘ಅಹೋ ಕಂಠಃ’ ಎಂದು ಹೊಗಳಿತಂತೆ; ‘ಪ್ರಾಪ್ತೇ ತು ಷೋಡಷೇ ವರ್ಷೇ ಗಾರ್ದಭೀ ಅಪ್ಸರಾ ಭವೇತ್’ ಅಂತೆ. ಈ ಅಂತೆಕಂತೆಗಳಲ್ಲಿ ಇರುವುದು ಕೊಂಕುಬುದ್ಧಿಯ ಸೌಂದರ್ಯ ಮೀಮಾಂಸೆ. ನಮ್ಮ ಶಾಸ್ತ್ರೀಯ ಸಂಗೀತ ಪ್ರಾಣಿಗಳಿಗೆ ಕರ್ಣಕಠೋರವಾಗಿ ಕೇಳಿಸಬಹುದಲ್ಲವೇ? ಒಳಗಣ್ಣು ತೆರೆದು ನೋಡಿದವರಿಗೆ ಕತ್ತೆಮರಿಯಷ್ಟು ಮುದ್ದು ಮತ್ತೊಂದಿಲ್ಲವೆಂದು ತಿಳಿಯುವುದು. ಸತ್ಯಕ್ಕೆ ಹತ್ತು ಮುಖಗಳಿವೆ. ಕಟುವಾಸ್ತವ ಚಿತ್ರಿಸಲು ಧೈರ್ಯಬೇಕು. ಬೇಲೂರಿನ ಶಿಲ್ಪಗಳಲ್ಲಿ ಒಬ್ಬ ಸುಂದರ ತರುಣ ಗಾರ್ದಭಿಯ ಜತೆ ನಿಂತಿದ್ದಾನಲ್ಲ. ಇಬ್ಬರ ಮೊಗದ ಮಂದಸ್ಮಿತವನ್ನು ಶಿಲ್ಪಿ ಎಷ್ಟು ವೈನಾಗಿ ಕಟೆದಿದ್ದಾನೆ! ಎಂ.ಎಫ್. ಹುಸೇನರು ಬೇಲೂರಿಗೊ ಈಜಿಪ್ಟಿಗೊ ಭೇಟಿ ಕೊಟ್ಟಿದ್ದರೆ, ಬಹುಶಃ ಚಿತ್ರಪಟಕ್ಕೆ ಕೆಲಸವಿಲ್ಲದೆ ಆಗಸದಲ್ಲಿ ಹಾರುವ ಅಶ್ವವನ್ನು ವಸ್ತುವಾಗಿ ಇರಿಸಿಕೊಳ್ಳುತ್ತಿರಲಿಲ್ಲ. ಇಷ್ಟಕ್ಕೂ ಗಾರ್ದಭಗಳ ಚೆಲುವನ್ನೂ ದನಿಯ ಇಂಪನ್ನೂ ಅಖೈರಾಗಿ ತೀರ್ಮಾನಿಸುವ ಅಧಿಕಾರವಿರುವುದು ನಮಗಲ್ಲ. ಮತ್ತೊಂದು ಕತ್ತೆಗೆ.

ಕತ್ತೆಯ ಗುಣಗಳನ್ನು ಕೊಂಡಾಡುವ ಸಾಹಿತ್ಯ, ಸಂಸ್ಕೃತದಲ್ಲಾಗಲಿ ಕನ್ನಡದಲ್ಲಾಗಲಿ ತೀರಾ ಕಡಿಮೆ. ‘ಕತ್ತೆ ಬಲ್ಲುದೇ ಕಸ್ತೂರಿ ನಾತವ?’ ಎಂದು ಯಾರೊ ಪ್ರಶ್ನೆ ಹಾಕಿದ್ದಾನೆ. ಈ ದಡ್ಡನಿಗೆ ಕಸ್ತೂರಿಯೂ ಒಂದು ಮೃಗಮದವೆಂದು ಗೊತ್ತಿರಲಿಕ್ಕಿಲ್ಲ. ಕಸ್ತೂರಿ ಕಂಪು ತನಗೆ ಇಷ್ಟವಿಲ್ಲವೆಂದು ಕತ್ತೆ ಯಾರಲ್ಲಿ ಹೇಳಿದೆ? ಬಾಯಿ ಸತ್ತವರನ್ನು ಆಡಿಕೊಳ್ಳುವುದಕ್ಕೆ ಲೋಕದಲ್ಲಿ ನೂರು ಜನ. ‘ಕತ್ತೆಗೇಕೆ ಕಡಗ’ ಗಾದೆಯನ್ನೇ ತೆಗೆದುಕೊಳ್ಳಿ. ಚಿನ್ನಬೆಳ್ಳಿ ಕಡಗ ಧರಿಸಲು ಮನುಷ್ಯರು ಮಾತ್ರ ಅರ್ಹರು ಎಂಬ ಸೊಕ್ಕು ಇಲ್ಲಿ ಮೆರೆಯುತ್ತಿದೆ. ಕತ್ತೆ ತನಗೆ ಕಡಗ ತೊಡಿಸಿರೆಂದು ಅರ್ಜಿಯನ್ನೇನೂ ಹಾಕಿಲ್ಲವಲ್ಲ. ಇಷ್ಟಕ್ಕೂ ಕಡಗ ತೊಟ್ಟವರು ಸುಖವಾಗಿದ್ದಾರೆಯೇ? ರಾಜಸ್ಥಾನದ ಒಂದು ಮುದುಕಿ ಕಾಲಕಡಗ ಹಾಕಿಕೊಂಡು ಹಿಮಾಲಯ ಯಾತ್ರೆಗೆ ಬಂದಿತ್ತು. ಪರ್ವತವನೇರುತ್ತ ನಡುವೆ ಕೂತು ವಿಶ್ರಾಂತಿ ಪಡೆಯುತ್ತಿರುವಾಗ್ಗೆ, ಅವಳ ಪಾದ ಗಮನಿಸಿದೆ. ಅರ್ಧಕೇಜಿ ತೂಗುವ ಬೆಳ್ಳಿಕಡಗಗಳು. ಅವು ಕಣಕಾಲಿಗೆ ಬಡಿದಾಡಿ ಚರ್ಮವೆಲ್ಲ ಜಡ್ಡುಗಟ್ಟಿ ಕಪ್ಪಾಗಿತ್ತು. ಆಕೆಯ ಮುಖವನ್ನು ಆರ್ತವಾಗಿ

